ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕಃ **23.06.2026**

ಮುಖ್ಯ ವಿಚಾರಣೆಃ ಶ್ರೀಮತಿ ಎಸ್ ಎಂ ವಿ   ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರ ಹಾಜರುಪಡಿಸಿದ್ದು, ಅದರಲ್ಲಿ ಬರೆದಿರುವುದು ಸತ್ಯವಿರುತ್ತದೆ. ನಾನೆ ಹೇಳಿ ಬರೆಸಿ ಸಹಿ ಮಾಡಿರುತ್ತೇನೆ.

ಈ ಕೇಸಿನಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳಲ್ಲಿ ಅಲಭ್ಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-1 ಎಂದು, ತಹಶೀಲ್ದಾರವರು ಕಳುಹಿಸಿರುವ  ವರದಿ , ಹೇಳಿಕೆ , ಮಹಜರ ,  ಜ್ಞಾಪನಾ ಹಾಗೂ ಅರ್ಜಿಯನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ 2 ಎಂದು,  ಆದಾರ ಕಾರ್ಡ್, ಚುನಾವಣೆ ಗುರುತಿನ ಚೀಟಿ , ಮತ್ತು ಎಸ್ ಎಸ್ ಎಲ್ ಸಿ ಮಾರ್ಕ್ಸ್ ಕಾರ್ಡನ ನೋಟರೈಸ್ಡ್ ಕಾಪಿಯನ್ನು  ಹಾಜರುಪಡಿಸಿದ್ದು ಅವುಗಳನ್ನು ಅಸಲಿನೊಂದಿಗೆ ಪರಿಶೀಲಿಸಿ  ಅವುಗಳನ್ನು ಅಸಲನೊಂದಿಗೆ ಪರಿಶೀಲಿಸಿ ನಿಪಿ-3 ರಿಂದ 5  ಎಂದು ಗುರುತಿಸಿ ಅಸಲು ದಾಖಲಾತಿಗಳನ್ನು ಹಿಂತಿರುಗಿಸಲಾಯಿತು.

ಪಾಟೀ ಸವಾಲುಃ

ಎದುರುದಾರರು ಏಕಪಕ್ಷಿಯವಾದ ಕಾರಣ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ